# ಮಧ್ವರಾಯರ ದೇವತಾರ್ಚನೆಯ

ಶ್ರೀಮದುತ್ತರಾದಿಮಠದಲ್ಲಿ ಪ್ರತಿನಿತ್ಯ ಪೂಜೆಗೊಳ್ಳುವ ಶ್ರೀಮನ್ಮಧ್ವಾಚಾರ್ಯ ಕರಾರ್ಚಿತವಾದ ೨೮ ಪ್ರತಿಮೆಗಳ ಬಗ್ಗೆ ತಿಳಿಸಿಕೊಡುವ, ದಾಸಶ್ರೇಷ್ಠ ಪುರಂದರ ದಾಸರ ಕೃತಿ ಮಧ್ವರಾಯರ ದೇವತಾರ್ಚನೆಯ ರಘುನಾಥರು ಪೂಜಿಸುವ ಸೊಬಗು ಈ ಸಾಹಿತ್ಯದ ಅನುಸಂಧಾನ. (Ref.: https://www.uttaradimath.org/parampara/sri-raghunatha-tirtha)

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** This is from the book: Purandara Sahitya Darshana, Samputa 2, Adhyatma Darshana edited by Prof. S.K. Ramachandra Rao.
3. **Note:** The wordings in both the above references are matching.
4. **Note:** The wordings of the singer are slightly different and are not mentioned here.

ರಾಗ: ಕಾಂಬೋಧಿ ತಾಳ: ಝಂಪೆ

ಮಧ್ವರಾಯರ ದೇವತಾರ್ಚನೆಯ ॥ ಪ ॥
ಪ್ರಸಿದ್ಧ ರಘುನಾಥರು ಪೂಜಿಸುವ ಸೊಬಗಿನ ॥ ಅಪ ॥

ಮೂಲ ರಘುಪತಿ ಒಂದು ಮುದ್ದು ಜಾನಕಿ ಒಂದು
ಲೀಲೆ ದಿಗ್ವಿಜಯ ರಾಮ ಮೂರ್ತಿ ಒಂದು
ಸಾಲಿಗ್ರಾಮ ಹಯಗ್ರೀವ ಮೊದಲಾದುವು ನಾಲ್ಕು
ಚೆಲುವ ಸುದರ್ಶನಗಳೆರಡು ಚಕ್ರಾಂಕಿತಗಳೈದು ॥ 1 ॥

ಅಭಿಷೇಕ ಶಂಖ ಒಂದು ಅಕ್ಷಯ ಪಾತೆಯು ಒಂದು
ಶುಭನಿಧಿಯ ಬಲಮುರಿ ಶಂಖ ಒಂದು
ಉಭಯ ಪಶ್ಚಿಮಧೇನು ಒಂದು ಉತ್ತಮವಾದ ಮುದ್ರೆ ಒಂದು
ಚಂಕ್ರಾಂಕಿತಗಳೆರಡು ಬಾಣವೆರಡು ॥ 2 ॥

ವೇದವ್ಯಾಸ ಮೂರ್ತಿ ನಾಲ್ಕು ಕ್ಷೀರದಿ ಲೋಲ್ಯಾಡುವ ಕೂರ್ಮ ಒಂದು

ಸ್ಮರಿಸಿ ಇಪ್ಪತ್ತೆಂಟು ಮೂರುತಿಗಳನು
ಪುರಂದರ ವಿಠಲನ್ನ ಪೂರ್ಣ ಭಕ್ತರೆಂಬ
ಈ ರಘುನಾಥ ತೀರ್ಥರು ಎಷ್ಟು ಪುಣ್ಯವಂತರೊ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಇದು ಉತ್ತರಾದಿಮಠದ ಪರಂಪರೆಯಲ್ಲಿ ವಿದ್ಯಾನಿಧಿ ತೀರ್ಥರ ತರುವಾಯ ಪೀಠಕ್ಕೆ ಬಂದು ರಘುನಾಥ ತೀರ್ಥರನ್ನು ಕುರಿತ ಪದ. ಇವರು ಶ್ರೀಪಾದರಾಜರ ಸಮಕಾಲೀಕರು; ವ್ಯಾಸರಾಯ ಸ್ವಾಮಿಗಳನ್ನೂ ಚೆನ್ನಾಗಿ ಬಲ್ಲವರು, ಶ್ರೀಪಾದರಾಜರೂ, ವ್ಯಾಸರಾಯರೂ, ರಘುನಾಥ ತೀರ್ಥರೂ ಕಲೆತು ಕ್ಷೇತ್ರಾಟನೆ ಮಾಡುತ್ತಿದ್ದರೆಂದು ತಿಳಿದುಬರುತ್ತದೆ. ರಘುನಾಥ ತೀರ್ಥರು ಮಳಖೇಡದಲ್ಲಿ ವೃಂದಾವನಸ್ಥರಾದರು.

**ಇಪ್ಪತ್ತೆಂಟು ಮೂರುತಿಗಳನು** – ಮಧ್ವಾಚಾರ್ಯರ ಸಾಕ್ಷಾಚ್ಛಿಷ್ಯರಾದ ಮಾಧವ ತೀರ್ಥರು ಈ ಮೂರ್ತಿಗಳನ್ನು ಪೂಜೆಮಾಡುತ್ತಿದ್ದರೆಂಬ ಶ್ಲೋಕವೊಂದಿದೆ. 'ಲಕ್ಷ್ಮೀನಾರಾಯಣ ಶ್ರೀಹಯಮುಖ ದಧಿಕೃದ್ವಾಮನ ಶ್ರೀಧರಾಖ್ಯಾನ್' ಎಂದು ಆರಂಭವಾಗುವ ಈ ಶ್ಲೋಕದಲ್ಲಿ ಲಕ್ಷ್ಮೀನಾರಾಯಣ, ದಧಿವಾಮನ, ಐದು ವ್ಯಾಸರ ಮಳಲು ಮುಟ್ಟಿಗೆ, ಮೂಲ ರಾಮ, ಮೂಲ ಸೀತೆ, ಐದು ಸುದರ್ಶನಗಳು, ಎರಡು ಬಾಣಗಳು, ಎರಡು ಬಲಮುರಿ ಶಂಕಗಳು, ಹಯಗ್ರೀವ, ಶ್ರೀಧರ, ದಿಗ್ವಿಜಯ ರಾಮ, ರಾಮಟಂಕಿವರಹ, ಐದು ಚಕ್ರಾಂಕಿತಗಳು, ಅಕ್ಷಯಪಾತ್ರೆ ಎಂದು ಒಕ್ಕಣೆಯಿದೆ.

**Classification:** Keerthane
**Ankita:** purandara vittala
**Location:** Koppara*, Raichur Dist, Karnataka (see * below)
**Category:** Madhwaraya Stuti, Guru Stuti
**Group Words:** archane, madhva, madhwacharya, rama, raghunatha, sita, puje, saligrama, hayagriva, chakra, abhisheka, Akshaya, shankha, ksheera, purna, punya, uttaradi
**Pravachana:** NA
**Explanation:** NA

**(*) ರಚನೆಯ ಸ್ಥಳ:** ಈ ಹಾಡನ್ನು ಪುರಂದರ ದಾಸರು, ಸಾಲಿಗ್ರಾಮದಲ್ಲಿ ಒಡಮೂಡಿರುವ ಷೋಡಶ ಬಾಹು ಶ್ರೀ ಲಕ್ಷ್ಮಿ ನರಸಿಂಹ ಸ್ವಾಮಿ ನೆಲೆಸಿರುವ ಕೊಪ್ಪರ ಕ್ಷೇತ್ರದಲ್ಲಿ (ಕರ್ನಾಟಕದಲ್ಲಿ

ಇರುವ ರಾಯಚೂರ ಹತ್ತಿರ) ರಚಿಸಿದ್ದಾರೆಂದು ಕೊಪ್ಪರ ಕ್ಷೇತ್ರದಲ್ಲಿಯ ದೇವಸ್ಥಾನದ ಹಿರಿಯ ಅರ್ಚಕರಾದ ಶ್ರೀ ಅಶ್ವಥ ಆಚಾರ್ಯರು (ಅನಂತಾಚಾರ್ಯರ ಮಗ ಮತ್ತು ಗಿರಿಯಾಚಾರ್ಯರ ಮೊಮ್ಮಗ) ಹೇಳುತ್ತಾರೆ.  ಆದರೆ ಇದರ ಬಗ್ಗೆ ಎಲ್ಲೂ ಲಿಖಿತ ಮಾಹಿತಿಗಳಿಲ್ಲ ಮತ್ತು ಯಾವ ಉಲ್ಲೇಖಗಳು ನನಗೆ ದೊರಕಿಲ್ಲ.